ಓ.ಎಸ್. ನಂ. 120/2017 ಡಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 15.2.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎನ್.ಹೆಚ್.ಎಂ ವಕೀಲರಿಂದಃ**

ನನ್ನ ಹೆಚ್ಚುವರಿ ತಕರಾರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ಹುಟ್ಟುವ ಪೂರ್ವದಲ್ಲಿ ಆಸ್ತಿಗಳ ಬಗ್ಗೆ ಯಾವ ಬೆಳವಣಿಗೆಯಾಗಿರುತ್ತದೆ ಎಂದು ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿದಾರರು ನನ್ನ ತಂದೆ ನನಗೆ ಹೇಳಿರುತ್ತಾರೆ ಎನ್ನುವರು. ನನ್ನ ತಂದೆ ದಿನಾಂಕ 31.5.2023 ರಂದು ತೀರಿಕೊಂಡಿರುತ್ತಾರೆ. ದಾವ 2 ನೇ ಐಟಂ ಆಸ್ತಿಯನ್ನು ಖರೀದಿ ಮಾಡಿದಾಗ ಅದಕ್ಕೆ ನೀಡಿರುವ ಹಣವನ್ನು ಹೇಗೆ ಒಟ್ಟಗೂಡಿಸಿ ನೀಡಿರುತ್ತಾರೆ ಎಂದು ನನ್ನ ತಂದೆ ನನಗೆ ಹೇಳಿರುತ್ತಾರೆ. ದಾವ 2 ನೇ ಐಟಂ ಆಸ್ತಿಯ ಮೂಲ ಮಾಲೀಕರು ಪುಟ್ಟಸೋಮಚಾರ್ ಮತ್ತು ನಿಂಗಮ್ಮ ಆಗಿರುತ್ತಾರೆ. ಸದರಿ ಆಸ್ತಿಯನ್ನು ಪುಟ್ಟಸೋಮಚಾರ್ ಮತ್ತು ನಿಂಗಮ್ಮ ರವರು ನನ್ನ ತಾತ ವೆಂಕಟಪ್ಪ ಅಲಿಯಾಸ್ ಕರಿಯಪ್ಪ ರವರಿಗೆ 500/- ರೂ.ಗಳಿಗೆ ನೋಂದಾಯಿತ ಭೋಗ್ಯ ಮಾಡಿದ್ದರು. ಸಾಮಾನ್ಯವಾಗಿ ಯಾವುದೇ ಆಸ್ತಿಯನ್ನು ಖರೀದಿ ಮಾಡಬೇಕಾದರೆ ಸದರಿ ಆಸ್ತಿಯ ಮೇಲಿರುವ ಋಣಗಳನ್ನು ಸಂದಾಯ ಮಾಡಿ ಖರೀದಿ ಮಾಡುತ್ತಾರೆ ಎಂದರೆ ಸರಿ. ಸದರಿ ಭೋಗ್ಯ ಬಿಡುಗಡೆಯಾಗಿರುವ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ. ನನ್ನ ಅಜ್ಜಿ ಚಿಕ್ಕತಾಯಮ್ಮನವರಿಗೆ ನೀಡಿದ್ದಾರೆ ಎಂದು ಹೇಳುವ ಸರ್ವೆ ನಂ.14/4 ರ 29 ಗುಂಟೆ ಆಸ್ತಿಯು ಈಗ ನನ್ನ ಅಜ್ಜಿಯ ಹೆಸರಿನಲ್ಲಿರುತ್ತದೆ. ಸದರಿ 29 ಗುಂಟೆ ಆಸ್ತಿಯಲ್ಲಿ ಸಹ ನನ್ನ ತಂದೆ, ನನ್ನ ದೊಡ್ಡಪ್ಪ, ಚಿಕ್ಕಪ್ಪಂದಿರಿಗೆ ಸಮನಾದ ಹಕ್ಕು ಇರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ವಾದಿಯರು ವ್ಯವಸಾಯ ಮಾಡಿಕೊಂಡಿರುತ್ತಾರೆ. ಸರ್ವೆ ನಂ.14/2 ರ ಆಸ್ತಿಯ ಖಾತೆಯು ನನ್ನ ತಂದೆಯ ಹೆಸರಿನಲ್ಲಿರುತ್ತದೆ. ದಾವ ಆಸ್ತಿ 1, 3 ಮತ್ತು 4 ರ ಆಸ್ತಿಗಳ ಖಾತೆ ಬದಲಾವಣೆಗೆ ನಾನು ತಹಶೀಲ್ದಾರ್ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೆನು ಎಂದರೆ ಸರಿ. ಸದರಿ ಅರ್ಜಿಯು ವಜಾ ಆಗಿರುತ್ತದೆ ಎಂದರೆ ಸಾಕ್ಷಿದಾರರು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಖಾತೆ ಮಾಡಲು ಬರುವುದಿಲ್ಲ ಎಂದು ಹೇಳಿ ವಜಾ ಆಗಿರುತ್ತದೆ ಎನ್ನುವರು. ನಂತರ ನಾನು ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಅದು ಸಹ ವಜಾ ಆಗಿರುತ್ತದೆ. ಸಾಮಾನ್ಯವಾಗಿ ಒಂದು ಕುಟುಂಬ ಬೇರೆಯಾಗಿ ವಾಸವಾಗಿದ್ದರೆ ಸದರಿ ಕುಟುಂಬಕ್ಕೆ ಪಡಿತರ ಚೀಟಿ ನೀಡುತ್ತಾರೆ ಎಂದರೆ ಸರಿ. ನನ್ನ ತಂದೆ 1962 ರ ನಂತರ ಪ್ರತ್ಯೇಕವಾಗಿ ವಾಸವಾಗಿದ್ದ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಯಾವ ದಾಖಲೆಯನ್ನು ಹಾಜರುಪಡಿಸಿರುತ್ತೀರಿ ಎಂದರೆ ಸಾಕ್ಷಿದಾರರು ರೇಶನ್ ಕಾರ್ಡನ್ನು ಹಾಜರುಪಡಿಸಿರುತ್ತೇನೆ ಎನ್ನುವರು. ನಾನು ಆ ರೀತಿ ಯಾವುದೇ ರೇಶನ್ ಕಾರ್ಡನ್ನು

ಹಾಜರುಪಡಿಸಿರುವುದಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯನ್ನು ನಂಜನಗೂಡು ತಾಲ್ಲೂಕಿನ ಹದಿನಾರು ಗ್ರಾಮದ ನಂಜುಂಡಸ್ವಾಮಿಯವರಿಗೆ ಮದುವೆ ಮಾಡಿಕೊಡಲಾಗಿರುತ್ತದೆ. 6 ನೇ ಪ್ರತಿವಾದಿಯು ಗಂಡನ ಮನೆ ಹಾಗೂ ದೆಗ್ಗಲಹುಂಡಿ ಎರಡೂ ಕಡೆ ವಾಸವಾಗಿರುತ್ತಾರೆ. 1962 ರಲ್ಲಿ ನಾನು ಹೇಳುವಂತೆ ಯಾವುದೇ ವಿಭಾಗವಾಗಿರುವುದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ 3 ಮತ್ತು 4 ನೇ ಐಟಂ ಆಸ್ತಿಗಳು ಒಟ್ಟು ಕುಟುಂಬದ ಅವಶ್ಯಕತೆಗೆ ಮಂಜೂರಾಗಿರುವ ಆಸ್ತಿಗಳು ಎಂದರೆ ಸರಿಯಲ್ಲ. ಈಗಲೂ ಸಹ ವಾದಿ ಪ್ರತಿವಾದಿಯರು ದಾವಆಸ್ತಿಯ ಜಂಟಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.